**ದಿನಾಂಕಃ 31-07-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ .

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

ನಿ.ಪಿ-1 : ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿ,

ನಿ.ಪಿ-2 : ದೂರಿನ ದೃಢೀಕೃತ ಪ್ರತಿ,

ನಿ.ಪಿ-3 : ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿ,

ನಿ.ಪಿ-4 : ಐ.ಎಂ.ವಿ ವರದಿಯ ದೃಢೀಕೃತ ಪ್ರತಿ,

ನಿ.ಪಿ-5 : ನನ್ನ ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿ,

ನಿ.ಪಿ-6 : ಅಂತಿಮ ವರದಿಯ ದೃಢೀಕೃತ ಪ್ರತಿ,

ನಿ.ಪಿ-7 : ಬಿಡುಗಡೆ ಪ್ರಮಾಣ ಪತ್ರ,

ನಿ.ಪಿ-8 : ಒ.ಪಿ.ಡಿ ಕಾರ್ಡ

ನಿ.ಪಿ-9 : ಒಟ್ಟು 6 ಮೆಡಿಕಲ್ ಬಿಲ್ ಗಳು

ನಿ.ಪಿ-10 : ನನ್ನ ಅಂಗನ್ಯೂನ್ಯತೆ ಪ್ರಮಾಣ ಪತ್ರ,

ನಿ.ಪಿ-11 : ಎಕ್ಸ-ರೇ ಪಿಲ್ಮ

ನಿ.ಪಿ-12 : ಆಧಾರ ಕಾರ್ಡನ ನೋಟರೈಜ್ಡ ಪ್ರತಿ,
(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ನಿ.ಪಿ-13 : ಪಾನ್ ಕಾರ್ಡನ ನೋಟರೈಜ್ಡ ಪ್ರತಿ, (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ನಿ.ಪಿ-14 : ಬ್ಯಾಂಕ್ ಪಾಸ್ ಬುಕ್ ನ ನೋಟರೈಜ್ಡ ಪ್ರತಿ,
(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಬಿ ಸಿ ಪಿ ವಕೀಲರಿಂದಃ**

1. ನನ್ನ ಸ್ವಂತ ಊರು ಚನ್ನಗಿರಿ ತಾಲೂಕು ಹರೋನ ಹಳ್ಳಿ ಆಗಿರುತ್ತದೆ. ನನ್ನ ಆಧಾರ ಕಾರ್ಡ, ವೋಟರ್ ಐಡಿ ಕಾರ್ಡ, ರೇಶನ್ ಕಾರ್ಡ ಎಲ್ಲವೂ ಅದೇ ವಿಳಾಸದಲ್ಲಿರುತ್ತದೆ. ನಾನು ರಾಣೇಬೆನ್ನೂರಿನಲ್ಲಿ ವಾಸವಾಗಿರುವುದಿಲ್ಲ. ಚನ್ನಗಿರಿ ನ್ಯಾಯಾಲಯದಲ್ಲಿ ಈ ಕೇಸ್ ದಾಖಲಿಸಬಹುದಾಗಿತ್ತಲಾ ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋಗಿಲ್ಲ ಎಂದು ಹೇಳುತ್ತಾರೆ. ಅಪಘಾತವು ಶಿಕಾರಿಪುರ ರಸ್ತೆಯ ಕುಂಚೇನಹಳ್ಳಿಯಲ್ಲಿ ಆಗಿರುತ್ತದೆ. ನಾನು ಕುಂಚೇನಹಳ್ಳಿಗೆ ಅಕ್ಕನ ಮನೆಗೆ ಹೋಗಿದ್ದೆನು. ನಾನು ನನ್ನ ಅಕ್ಕನ ಮನೆಗೆ ಹೋಗುವ ದಾವಂತದಲ್ಲಿ ಅಡ್ಡಾದಿಡ್ಡಿಯಾಗಿ ರಸ್ತೆಯಲ್ಲಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಹಿಂದಿನಿಂದ ಬರುತ್ತಿದ್ದ ಮೋಟಾರ್ ಸೈಕಲ್ ಸವಾರ ಹಾರ್ನ ಹಾಕಿದರೂ ಸಹ ನಾನು ಅದನ್ನು ಗಮನಿಸದೇ ಅಡ್ಡಾದಿಡ್ಡಿಯಾಗಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದಲೇ ಆಗಿದೆ ಎಂದರೆ ಸಾಕ್ಷಿ ನಾನು ರಸ್ತೆಯ ಎಡಬದಿಯಲ್ಲಿ ನನ್ನ ಪಾಡಿಗೆ ನಾನು ನಡೆದುಕೊಂಡು ಬರುತ್ತಿದ್ದೆ ಎಂದು ಹೇಳುತ್ತಾರೆ. ಅಪಘಾತ ನನ್ನ ತಪ್ಪಿನಿಂದಲೆ ಆಗಿದೆ ಎಂದರೆ ಸರಿಯಲ್ಲ.

2. ನನಗೆ ಅಪಘಾತದಲ್ಲಿ ಆದ ಗಾಯಗಳು ಸಾದಾ ಸ್ವರುಪದ ಗಾಯಗಳಾಗಿರುತ್ತವೆ ಎಂದರೆ ಸಾಕ್ಷಿ ಕಾಲು ಮೂಳೆ ಮುರಿದು ಆಪರೇಶನ್ ಆಗಿದೆ ಎಂದು ಹೇಳುತ್ತಾರೆ. ಅಪಘಾತದಲ್ಲಿ ನನ್ನ ಬಲಗಾಲಿನ ಮೂಳೆ ಮುರಿತ ಆಗಿರುತ್ತದೆ. ಅಪಘಾತವಾದ ತಕ್ಷಣ ನನ್ನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಾನು 15-20 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಅಲ್ಲಿ ಯಾವ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ ಎಂದು ನನಗೆ ಈ ದಿನ ನೆನಪಿರುವುದಿಲ್ಲ. ಆಪರೇಶನ್ ಮಾಡಿದ ವೈದ್ಯರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಕಾಲಿಗೆ ಆಪರೇಶನ್ ಮಾಡಿ, ಸ್ಟೀಲ್ ರಾಡ್ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ನನಗೆ ಕೆಲಸ ಮಾಡಲು ಹಾಗೂ ಕುಳಿತು ಊಟ ಮಾಡಲು ಆಗುವುದಿಲ್ಲ. ಯಾವ ತಾರೀಖಿನಂದು ಆಪರೇಶನ್ ಆಗಿದೆ ಎಂದು ಈಗ ನನಗೆ ನೆನಪಿರುವುದಿಲ್ಲ. ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಸರ್ಕಾರಿ ಆಸ್ಪತ್ರೆಯಾಗಿರುವುದರಿಂದ ಎಲ್ಲಾ ಚಿಕಿತ್ಸೆ ಉಚಿತವಾಗಿ ಸಿಕ್ಕಿರುತ್ತದೆ ಎಂದರೆ ಸಾಕ್ಷಿ ಔಷಧಿಯನ್ನು ಹೊರಗಿನಿಂದ ತರಲು ಬರೆದುಕೊಡುತ್ತಿದ್ದರು ಎಂದು ಹೇಳುತ್ತಾರೆ.

3. ನಿಪಿ-5 ಗಾಯದ ಪ್ರಮಾಣ ಪತ್ರದಲ್ಲಿ ದಿಃ 03-11-2020 ಎಂದು ಮಾತ್ರ ನಮೂದಾಗಿದ್ದು, ಡಿಸ್ಚಾರ್ಜ ಆದ ದಿನಾಂಕ ನಮೂದಾಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-7 ಬಿಡುಗಡೆ ಪತ್ರದಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಆದ ದಿನಾಂಕ 18-11-2020 ಎಂದು ತಿದ್ದುಪಡಿ ಮಾಡಿರುವುದು ಕಂಡು ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-9 ಮೆಡಿಕಲ್ ಬಿಲ್ ಗಳನ್ನು ಈ ಕೇಸಗೆ ಅನುಕೂಲವಾಗಲಿ ಎಂದು ಸೃಷ್ಠಿ ಮಾಡಿ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ 2 ಲಕ್ಷ 80 ಸಾವಿರ ಖರ್ಚು ಮಾಡಿದ್ದು, ಇನ್ನು 1 ಲಕ್ಷ 50 ಸಾವಿರ ಹಣ ಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ತಿಂಗಳು ಒಳರೋಗಿಯಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ ಎನ್ನುವ ಬಗ್ಗೆ ದಾಖಲಾತಿ ಹಾಜರು ಪಡಿಸಿಲ್ಲ. ನಾನು ಈಗ ಸಂಪೂರ್ಣ ಗುಣಮುಖನಾಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ತರಹದ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ.

4. ಡಾ. ನಿತಿನ್ ಎ.ಬಿ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರನ್ನು ನಾನು ನೋಡಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಅವರು ನನಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ಅವರ ಬಳಿ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಹೋಗಿದ್ದೆ ಎಂದರೆ ಸರಿಯಲ್ಲ. ನಿಪಿ-8 ಒಪಿಡಿ ಚೀಟಿಯಲ್ಲಿ ವೈದ್ಯರ ಹೆಸರು ಮತ್ತು ಸಹಿ ಇಲ್ಲ ಎಂದರೆ ಸರಿ. ಈ ಕೇಸ್ ಗೆ ಅನುಕೂಲವಾಗಲಿ ಎಂದು ನಿಪಿ-8 ನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

5. ಅಪಘಾತದ ಸಮಯದಲ್ಲಿ ನನಗೆ 60 ವರ್ಷ 10 ತಿಂಗಳು ಆಗಿತ್ತು ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ನನ್ನ ಹುಟ್ಟಿಧ ದಿನಾಂಕ 01-01-1960 ಎಂದು ಇದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ , ಗಾಯದ ಪ್ರಮಾಣ ಪತ್ರ ಮತ್ತು ಅರ್ಜಿಯಲ್ಲಿ ನನಗೆ 55 ವರ್ಷ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಹಿಂದೆನೂ ನಾನು ಏನೂ ಕೆಲಸ ಮಾಡುತ್ತಿರಲಿಲ್ಲ, ಈಗಲೂ ಸಹ ಏನು ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಜಮೀನು ಇದ್ದು ದಾಖಲೆ ಹಾಜರು ಪಡಿಸಿರುವುದಿಲ್ಲ. ಅಪಘಾತ ಸಮಯದಲ್ಲಿ ನಾನು ಕೃಷಿ ಮತ್ತು ಖಾಸಗಿ ಕೆಲಸ ಮಾಡುತ್ತಿದ್ದು ಅದರಿಂದ 30 ಸಾವಿರ ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಮೋಟಾರ್ ಸೈಕಲ್ ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಜೈ

ಶಂಕರ್ ಕೆ ಎಸ್ ಅಪಘಾತ ಸಮಯದಲ್ಲಿ ಮೋಟಾರ್ ಸೈಕಲ್ ಚಲಾಯಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಬೇರೆ ವ್ಯಕ್ತಿ ಮೋಟಾರ್ ಸೈಕಲ್ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಅಪಘಾತವಾದ 2 ದಿನಗಳ ನಂತರ ಜೈ ಶಂಕರ್ ಕೆ ಎಸ್ ರವರ ಹೆಸರು ಸೇರ್ಪಡೆ ಮಾಡಿ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಮೋಟಾರ್ ಸೈಕಲ್ ಚಾಲಕನಿಗೆ ಚಾಲನಾ ಪರವಾನಿಗೆ ಇಲ್ಲದ ಕಾರಣ 2 ನೇ ಎದುರುದಾರರ ಕಂಪನಿಯವರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.